ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ನೇವಿ-1/ಅಉಅ/97/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು-01, **ದಿ:23-03-2022**

**ಸುತ್ತೋಲೆ**

ವಿಷಯ: 2021-22ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಇದೇ ಕ್ರಮಾಂಕದ ಸುತ್ತೋಲೆ ದಿನಾಂಕ:17 ಮತ್ತು 28 ನೇ ಜನವರಿ 2022.

* * * * * * *

2021-22ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಬೋಧನಾ ಕಾರ್ಯಭಾರಕ್ಕೆ ಉಲ್ಲೇಖಿತ ದಿನಾಂಕ:17.01.2022 ರ ಈ ಕಛೇರಿಯ ಸುತ್ತೋಲೆಯಂತೆ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಪಡೆದು, ವಿಷಯವಾರು ರಾಜ್ಯವಾಪಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ, ಲಭ್ಯವಿರುವ ಕಾರ್ಯಭಾರಕ್ಕನುಗುಣವಾಗಿ ರಾಜ್ಯವಾಪಿ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ:25.02.2022 ರಿಂದ ದಿನಾಂಕ:09.03.2022 ರವರೆಗೆ 4 ಸುತ್ತಿನ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ಅದರಂತೆ, ಅಭ್ಯರ್ಥಿಗಳು ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿಕೊಂಡ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ನಾಲ್ಕು ಸುತ್ತುಗಳ ಕೌನ್ಸಿಲಿಂಗ್ ನಂತರದಲ್ಲಿಯೂ ಒಟ್ಟು ಸಮಾರು 1200 ಅತಿಥಿ ಉಪನ್ಯಾಸಕರಿಗೆ ಕಾರ್ಯಭಾರ ಲಭ್ಯವಿರುತ್ತದೆ.

ವಿವಿಧ ಸುತ್ತಿನ ಕೌನ್ಸಿಲಿಂಗ್‌ಗಳಲ್ಲಿ ಅಭ್ಯರ್ಥಿಗಳು ಭಾಗವಹಿಸಿ ಕರ್ತವ್ಯಕ್ಕೆ ಹಾಜರಾಗದೆ ಇರುವ ಖಾಲಿ ಸ್ಥಳಗಳಿಗೆ ಇತರೆ ಸ್ಥಳಗಳಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಂದ ಸ್ಥಳ ಬದಲಾವಣೆ ಕೋರಿ ಮನವಿಗಳನ್ನು ಸ್ವೀಕರಿಸಲಾಗಿದೆ.

ಸ್ಥಳ/ಕಾಲೇಜು ಬದಲಾವಣೆ ಕೋರುವ ಅತಿಥಿ ಉಪನ್ಯಾಸಕರಿಗೆ ಒಂದು ಬಾರಿಯ ಕ್ರಮವಾಗಿ, ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ **ಪ್ರಸ್ತುತ ಲಭ್ಯವಿರುವ ಕಾರ್ಯಭಾರಕ್ಕೆ** ಕೌನ್ಸಿಲಿಂಗ್ ಮೂಲಕ ಆಯಾ ವಿಷಯದಲ್ಲಿನ ಮೆರಿಟ್ ಆದಾರದ ಮೇಲೆ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಕೌನ್ಸಿಲಿಂಗ್ ಸಮಯದಲ್ಲಿ ಖಾಲಿ ಇರುವ ಸ್ಥಳ/ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಂದಾಗಿ ಉದ್ಭವಿಸುವ ಖಾಲಿ ಸ್ಥಳಗಳನ್ನು ಮೆರಿಟ್ ಆದಾರದ ಮೇಲೆ ನಂತರದಲ್ಲಿ ಕೌನ್ಸಿಲಿಂಗ್‌ಗೆ ಒಳಪಡುವ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು.

.....2

ಸ್ಥಳ/ಕಾಲೇಜು ಬದಲಾವಣೆ ಕೋರುವ ಅತಿಥಿ ಉಪನ್ಯಾಸಕರು ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ಕೋರಿಕೆಯನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರಿಗೆ ದಿನಾಂಕ:24-03-2022 ರೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಪ್ರತಿ ಅತಿಥಿ ಉಪನ್ಯಾಸಕರ ಕೋರಿಕೆ ಅರ್ಜಿಯನ್ನು ಪ್ರಾಂಶುಪಾಲರು ಇ.ಎಮ್.ಐ.ಎಸ್ ನಲ್ಲಿ ಸ್ವೀಕೃತಗೊಂಡ ದಿನದಂದೇ ನಮೂದಿಸುವುದು.

ಮುಂದುವರೆದು, ಮೇಲಿನ ಪ್ರಕ್ರಿಯೆ ನಂತರ ಇನ್ನೂ ಉಳಿಕೆಯಾಗಿರುವ ಕಾರ್ಯಭಾರಕ್ಕೆ ಈಗಾಗಲೇ ಸಿದ್ಧಪಡಿಸಿರುವ ವಿಷಯವಾರು ರಾಜ್ಯವಾರು ತಾತ್ಕಾಲಿಕ ಆಯ್ಕೆಪಟ್ಟಿಯನ್ವಯ 5ನೇ ಸುತ್ತಿನ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.

23/03/2022

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

**<u>ಇವರಿಗೆ: ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:</u>**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಸಂಬಂಧಪಟ್ಟ ಅತಿಥಿ ಉಪನ್ಯಾಸಕರುಗಳಿಗೆ.
4) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಈ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಇಂದ: ದಿನಾಂಕ: ------------

ಅತಿಥಿ ಉಪನ್ಯಾಸಕರು
---------------------------------- ಕಾಲೇಜು
--------------------------------------
ID No: ..........................................................
Subject: .........................................................
Mobile No.: ...................................................

ಇವರಿಗೆ:

ಪ್ರಾಂಶುಪಾಲರು
---------------------------------- ಕಾಲೇಜು
--------------------------------------

ಮಾನ್ಯರೆ,

**ಉಲ್ಲೇಖ:** 1. ಸುತ್ತೋಲೆ ಸಂಖ್ಯೆ ಕಾಶಿಇ/ನೇವಿ-1/ಅಉಆ/97/2021-22; ದಿನಾಂಕ:17.03.2022.

**ವಿಷಯ:** ಅತಿಥಿ ಉಪನ್ಯಾಸಕರಾಗಿ ಸ್ಥಳ/ ಕಾಲೇಜು ಬದಲಾವಣೆ ಕೋರುವ ಬಗ್ಗೆ

ನಾನು ದಿನಾಂಕ: ------------------ ರಂದು ನಡೆದ ಆನ್ ಲೈನ್ ಕೌನ್ಸಿಲಿಂಗ್ ನಲ್ಲಿ ಭಾಗವಹಿಸಿ -------------------------------------------------------- ಕಾಲೇಜನ್ನು ಆಯ್ಕೆ ಮಾಡಿಕೊಂಡು ದಿನಾಂಕ: -----------------ರಿಂದ ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ನಾನು ಸದ್ಯಕ್ಕೆ ಆಯ್ಕೆ ಮಾಡಿಕೊಂಡಿರುವ ಕಾಲೇಜಿಗೆ ಬದಲಾಗಿ ಕಾರ್ಯಭಾರ ಲಭ್ಯವಿರುವ ಇತರೆ ಸ್ಥಳ/ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಲು ಇಚ್ಚಿಸಿದ್ದು ಉಲ್ಲೇಖ-1 ರಂತೆ ಸಂಬಂಧಿಸಿದ ಕೌನ್ಸಿಲಿಂಗ್ ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

(ಅತಿಥಿ ಉಪನ್ಯಾಸಕರ ಹೆಸರು ಮತ್ತು ಸಹಿ)